O.S.No. 77/2021 PW-3

ದಿನಾಂಕ : 04.04.2025 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

<u>ಪಾಟೀ ಸವಾಲುಃ- ಪ್ರತಿವಾದಿ ರವರ ಪರ ಶ್ರೀ **SSP** ವಕೀಲರಿಂದ **:-**</u>

ನನ್ನ ಸಾಕ್ಷಿ ಪ್ರಮಾಣ ಪತ್ರದಲ್ಲಿ ಬರೆದ ಸಂಗತಿಗಳು ಇರುತ್ತವೆ. ನನಗೆ ಓದಲು ಮತ್ತು ಬರೆಯಲು ಬರುವುದಿಲ್ಲಾ. ದಾವಾ ಆಸ್ತಿಯ ಸಂಖ್ಯೆ ನನಗೆ ಗೊತ್ತಿಲ್ಲಾ. ದಾವಾ ಆಸ್ತಿಯ ಚೆಕ್ ಬಂದಿ ನನಗೆ ಗೊತ್ತಿಲ್ಲ. ಸಾಕ್ಷಿಯು ಮುಂದುವರೆದು ದಾವಾ ಆಸ್ತಿಯ ಹಿಂದೆ-ಮುಂದೆ ರಸ್ತೆ ಇರುತ್ತದೆ ಎಂದು ನುಡಿಯುತ್ತಾರೆ. ದಾವಾ ಆಸ್ತಿಯು ಪಿತ್ರಾರ್ಜಿತ ಆಸ್ತಿ ಎಂದರೆ ಸರಿ. ವಾದಿ ನಿವರಗಿ ಗ್ರಾಮದಲ್ಲಿ ವಾಸವಾಗಿದ್ದರು ಎಂದರೆ ಸರಿ. ವಾದಿಯು ನಿವರಗಿ ಗ್ರಾಮದಲ್ಲಿ ಆಸ್ತಿ ಹೊಂದಿದ್ದಾರೆ ಎಂದರೆ ಸರಿಯಲ್ಲ.

ವಾದಿಯು ನಿವರಗಿ ಗ್ರಾಮದಲ್ಲಿದ್ದು, ಪ್ರತಿವಾದಿಯು ದಾವಾ ಆಸ್ತಿಯಲ್ಲಿ ಶೆಡ್ ನಿರ್ಮಿಸಿ ಗಿರಣಿ ನಡೆಸುತ್ತಿದ್ದರು ಎಂದರೆ ಸಾಕ್ಷಿಯು ಮೊದಲಿಗೆ ವಾದಿಯು ಕಬ್ಜೆಯಲ್ಲಿದ್ದು ಈಗ ಪ್ರತಿವಾದಿಯರ ಕಬ್ಜೆಯಲ್ಲಿ ಇರುತ್ತದೆ ಎಂದು ನುಡಿಯತ್ತಾರೆ. ಪ್ರತಿವಾದಿಯು ಸುಮಾರು 4-5 ತಿಂಗಳ ಗಳಿಂದ ದಾವಾ ಆಸ್ತಿಯ ಕಬ್ಜೆಯಲ್ಲಿ ಇರುತ್ತಾರೆ. ಯಾವ ಇಸ್ವಿಯಿಂದ ಕಬ್ಜೆಯಲ್ಲಿ ಇರುತ್ತಾರೆ ಎಂದು ನನಗೆ ಹೇಳಲು ಬರುವುದಿಲ್ಲಾ. ನನ್ನ ಮನೆಯಿಂದ ದಾವಾ ಆಸ್ತಿಯು 100 ಅಡಿಗಳಷ್ಟು ದೂರದಲ್ಲಿ ಇರುತ್ತದೆ.

ವಾದಿಯು ಪ್ರತಿವಾದಿಯು ನಿರ್ಮಿಸಿದ ಶೆಡ್‌ನ್ನು ಅಕ್ರಮವಾಗಿ ತೆರವು ಗೊಳಿಸಿದರಿಂದ ವಾದಿಯ ಮೇಲೆ ಅಪರಾಧ ಪ್ರಕರಣ ದಾಖಲಾಗಿರುತ್ತದೆ ಎಂದರೆ ಸರಿ. ಪ್ರತಿವಾದಿಯ ಗಂಡನ ಹೆಸರು ಗಜಾನನ ಎಂದರೆ ಸರಿ. ಗಜಾನನ ತೀರಿಕೊಂಡು ಸುಮಾರು 4-ವರ್ಷ ಆಗಿರುತ್ತದೆ. ವಾದಿಯ ತಂದೆ ನಿಂಗಪ್ಪ ತೀರಿಕೊಂಡು ಸುಮಾರು 20-30 ವರ್ಷ ಆಗಿರುತ್ತವೆ. ವಾದಿಯ ತಾಯಿ ಭಾಗೀರತಿ ರವರು ನಿಂಗಪ್ಪನಿಗಿಂತ ಮೊದಲು ತೀರಿಕೊಂಡಿರುತ್ತಾರೆ. ನಿಂಗಪ್ಪನಿಗೆ ಮೂರು ಜನ ಮಕ್ಕಳು ಎಂದರೆ ಸರಿಯಲ್ಲ. ಪ್ರತಿವಾದಿಗೆ

ದಾವಾ ಆಸ್ತಿಯಲ್ಲಿ ಪಾಲು ಇರುತ್ತದೆ ಎಂದರೆ ಸರಿಯಲ್ಲ. ವಾದಿಯು ಗೆಳೆಯಾಗಿದ್ದರಿಂದ ಪ್ರತಿವಾದಿಯ ಗಂಡ ನಿಂಗಪ್ಪನ ಮಗ ಅಲ್ಲಾ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆಃ-ಇಲ್ಲ.

(ನನ್ನ ಉಕ್ತಲೇಖನದ ಮೇರೆಗೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು)

ಓ ಹೇ ಕೇ ಸರಿ ಇದೆ

ಸಿವಿಲ್ & ಪ್ರ.ದ.ನ್ಯಾ ದಂಡಾಧಿಕಾರಿಗಳು
ಅಫಜಲಪೂರ